ಮುಂದುವರೆದ ಕಾಮಗಾರಿಗಳನ್ನು ಮಾತ್ರ 2008–09ನೇ ಸಾಲಿನ ಅಪೆಂಡಿಕ್ಸ್–ಇನಲ್ಲಿ ಸೇರ್ಪಡೆಗೊಳಿಸಲಾಗಿದೆ. ಪ್ರಾರಂಭ ಆಗದಿರುವ ಕಾಮಗಾರಿಗಳನ್ನು ಕೈಬಿಡಲಾಗಿದೆ.

ಇ) 2009–10ನೇ ಸಾಲಿನ ಆಯವ್ಯಯದಲ್ಲಿನ ಅಪೆಂಡಿಕ್ಸ್–ಇನಲ್ಲಿ ಸೂಕ್ತ ಅನುದಾನವನ್ನು ಕಲ್ಪಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

231 ಹಾಗೂ 225 ಶ್ರೀ ಹೆಚ್.ಡಿ.ರೇವಣ್ಣ (ಹೊಳೇನರಸೀಪುರ) ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಮಾನ್ಯ ಕಾನೂನು ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ನಗರದಲ್ಲಿ ಹೊಸದಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಕೋರ್ಟ್‌ಕಾಂಪ್ಲೆಕ್ಸ್ ಹಾಗೂ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ನ್ಯಾಯಾಲಯದ ಕಟ್ಟಡಗಳನ್ನು ಪ್ರಾರಂಭಿಸಲು ಹಿಂದಿನ ಸಮ್ಮಿಶ್ರ ಸರ್ಕಾರ 2007–08ರಲ್ಲಿ ಮಂಜೂರಾತಿ ಮಾಡಿದ್ದು, 2008–09ರ ಅಪೆಂಡಿಕ್ಸ್–ಇನಿಂದ ಈ ಕಾಮಗಾರಿಯನ್ನು ಸರ್ಕಾರವು ಕೈಬಿಟ್ಟಿರುವುದು ನಿಜವೇ ಹಾಗಿದ್ದಲ್ಲಿ ಕಾರಣಗಳೇನು?

ಆ) ಮೇಲ್ಕಂಡ ಕಾಮಗಾರಿಗಳಿಗೆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಡಿಗಲ್ಲು ಶಂಖು ಸ್ಥಾಪನೆ ಮಾಡಿದ್ದು ನಿಜವೇ: ಹಾಗಿದಲ್ಲಿ ಈ ಕಾಮಗಾರಿಯನ್ನು 2008–09ರಲ್ಲಿ ಕೈಬಿಡಲು ಕಾರಣಗಳೇನು?

ಇ) ಈ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ ಮಾಹಿತಿ ನೀಡುವುದು?

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) :

ಅ) 2008–09ನೇ ಸಾಲಿನ ಅಪೆಂಡಿಕ್ಸ್–ಇನಿಂದ ಈ ಕಾಮಗಾರಿಯನ್ನು ಕೈಬಿಡಲಾಗಿದೆ.

2001–08ನೇ ಸಾಲಿನಲ್ಲಿ ಹಲವಾರು ಕಾಮಗಾರಿಗಳನ್ನು ಅಪೆಂಡಿಕ್ಸ್–ಇನಲ್ಲಿ ಹೊಸದಾಗಿ ಸೇರ್ಪಡೆಗೊಳಿಸಲಾಗಿತ್ತು. ಈ ಎಲ್ಲಾ ಕಾಮಗಾರಿಗಳನ್ನು 2008–09ನೇ ಸಾಲಿನಲ್ಲಿ ಇಲಾಖೆಗೆ ಒದಗಿಸಲಾದ ಅನುದಾನದಲ್ಲಿ

ಕೈಗೆತ್ತಿ ಕೊಳ್ಳಲು ಮಾತ್ರ 2008–09ನೇ ಸಾಲಿನ ಇನಲ್ಲಿ ಸೇರ್ಪಡೆಗೊಳಿಸಲಾಗಿದೆ. ಪ್ರಾರಂಭ ಆಗದಿರುವ ಳನ್ನು ಕೈಬಿಡಲಾಗಿದೆ.

ಆ) ಹೌದು ನಿಜ. 2007–08ನೇ ಸಾಲಿನಲ್ಲಿ ಹಲವಾರು ಕಾಮಗಾರಿ ಗಳನ್ನು ಅಪೆಂಡಿಕ್ಸ್–ಇನಲ್ಲಿ ಹೊಸದಾಗಿ ಸೇರ್ಪಡೆಗೊಳಿಸಲಾಗಿತ್ತು. ಈ ಎಲ್ಲಾ ಕಾಮಗಾರಿಗಳನ್ನು 2008–09ನೇ ಸಾಲಿನಲ್ಲಿ ಇಲಾಖೆಗೆ ಒದಗಿಸಲಾದ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದಕಾರಣ ಮುಂದು ವರೆದ ಕಾಮಗಾರಿಗಳನ್ನು ಮಾತ್ರ 2008–09ನೇ ಸಾಲಿನ ಅಪೆಂಡಿಕ್ಸ್–ಇನಲ್ಲಿ ಸೇರ್ಪಡೆಗೊಳಿಸಲಾಗಿದೆ. ಪ್ರಾರಂಭ ಆಗದಿರುವ ಕಾಮಗಾರಿಗಳನ್ನು ಕೈಬಿಡಲಾಗಿದೆ.

ಇ) 2009–10ನೇ ಸಾಲಿನ ಆಯವ್ಯಯದಲ್ಲಿನ ಅಪೆಂಡಿಕ್ಸ್–ಇನಲ್ಲಿ ಸೂಕ್ತ ಅನುದಾನವನ್ನು ಕಲ್ಪಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

224 ಶ್ರೀ ಹೆಚ್.ಡಿ.ರೇವಣ್ಣ, (ಹೊಳೇನರಸೀಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಡಿಸ್ಟಿಲರಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ಕಂಪನಿಯ ಹೆಸರು ಪಾಲುದಾರರ/ಮಾಲೀಕರ ವಿಳಾಸದೊಂದಿಗೆ ಪೂರಕ ಮಾಹಿತಿ ನೀಡುವುದು).

ಆ) 2006 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಪರವಾನಗಿ ನೀಡಿರುವ ಡಿಸ್ಟಿಲರಿಗಳ ಸಂಖ್ಯೆ ಎಷ್ಟು (ವರ್ಷಾವಾರು, ಜಿಲ್ಲಾವಾರು ಕಂಪನಿಯ ಹೆಸರು ಪಾಲುದಾರರ/ಮಾಲೀಕರ ವಿಳಾಸದೊಂದಿಗೆ ಪೂರ್ಣ ಮಾಹಿತಿ ನೀಡುವುದು)

ಇ) ಡಿಸ್ಟಿಲರಿಗಳನ್ನು ಪ್ರಾರಂಭಿಸದಿರುವ ಸಂಖ್ಯೆ ಎಷ್ಟು; ಪ್ರಾರಂಭಿ ಸದಿರಲು ಕಾರಣವೇನು.

ಈ) ರಾಜ್ಯದಿಂದ ಹೊರ ರಾಜ್ಯಗಳಿಗೆ ಪ್ರತಿ ವರ್ಷ ಸರಬರಾಜಾಗುವ ಮದ್ಯದ ಪ್ರಮಾಣವೆಷ್ಟು, (ಕಂಪನಿಗಳ ಹೆಸರು ಹಾಗೂ ಮದ್ಯದ ಹೆಸರುಗಳ ಮಾಹಿತಿಯನ್ನು ನೀಡುವುದು).

H-252-ಫ 97